**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 23.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಪರ ವಕೀಲರಿಂದಃ**

ನಾನು ನನ್ನ ತಕರಾರಿಗೆ ಸಂಬಂಧಿಸಿದಂತೆ Pen Drive ಹಾಗೂ Sec.65B Affidavit and Authorization and notarized ID card ಹಾಜರುಪಡಿಸಿದ್ದು ಸದರಿಯವುಗಳನ್ನು ಅರ್ಜಿದಾರರರ ಪರ ವಕೀಲರ ತಕರಾರಿಗೊಳಪಟ್ಟು ನಿ.ಆರ್.1, 1(ಎ) ಮತ್ತು 1(ಬಿ) ಮತ್ತು ನಿ ಆರ್.2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ನ್ಯಾಯಾಲಯಕ್ಕೆ ನಾನು ಸಾಕ್ಷಿ ಪ್ರಮಾಣಪತ್ರ ಸಲ್ಲಿಸಿದ್ದು ಅದಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಕೇಸಿಗೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಹೌದು ಎನ್ನುತ್ತಾರೆ. ಮೃತ ವ್ಯಕ್ತಿ ಆ ದಿನ ನನ್ನ ಬಸ್ಸಿನ ಪಕ್ಕ ಜಾಗ ಇದ್ದಿದ್ದಕ್ಕೆ ಮುಂದೆ ಹೋಗಿದ್ದು ಆನಂತರ ನಾನು ಬಲಭಾಗಕ್ಕೆ ನನ್ನ ಬಸ್ಸನ್ನು ಸಡನ್ ಆಗಿ ತೆಗೆದುಕೊಂಡಿದ್ದರಿಂದ ಅಪಘಾತವಾಗಿದೆ ಎಂದರೆ ಸಾಕ್ಷಿ ನಾನು ಬಲಭಾಗಕ್ಕೆ ತೆಗೆದುಕೊಂಡಿಲ್ಲ ಎನ್ನುತ್ತಾರೆ. ನನ್ನ ಬಸ್ಸನ್ನು ಸಡನ್ ಆಗಿ ಬಲಭಾಗಕ್ಕೆ ತೆಗೆದುಕೊಂಡಿದ್ದಕ್ಕೆ ಅಪಘಾತವಾಗಿದೆ ಎಂದು ದೋಷಾರೋಪಣೆ ಪಟ್ಟಿಯಲ್ಲಿ ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿ ಅವರು ಸುಳ್ಳು ದೋಷಾರೋಪಣೆ ಪಟ್ಟಿ ಹಾಕಿದ್ದಾರೆ ಎನ್ನುತ್ತಾರೆ. ಈ ಸಂಬಂಧ ದೋಷಾರೋಪಣೆ ಪಟ್ಟಿಯನ್ನು ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿರುತ್ತೇನೆ ದೂರು ಕೂಡ ಕೊಟ್ಟಿರುತ್ತೇನೆ ಎನ್ನುತ್ತಾರೆ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿಲ್ಲ ಎನ್ನುತ್ತಾರೆ. ಸದರಿ ಅಪಘಾತದಲ್ಲಿ ನನ್ನ ತಪ್ಪಿರುವ ಕಾರಣ ನಾನು ಆ ರೀತಿ ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ಸರಿಯಲ್ಲ. ಬಸ್ಸಿನಿಂದ ಇಳಿದು ಎಷ್ಟು ನಿಮಿಷ ವಿಡಿಯೋ ರೇಕಾರ್ಡ ಮಾಡಿದ್ದೀರಿ ಎಂದರೆ ಸಾಕ್ಷಿ ಒಂದು ಒಂದು

ನಿಮಿಷಗಳಂತೆ ಮೂರು ವಿಡಿಯೋ ಮಾಡಿರುತ್ತೇನೆ ಎನ್ನುತ್ತಾರೆ. ನಾವು ಕರ್ತವ್ಯದಲ್ಲಿರಬೇಕಾದರೆ ನಮ್ಮ ಮೊಬೈಲ್‌ನ್ನು ಕಚೇರಿಯಲ್ಲಿ ಕೊಟ್ಟು ಹೋಗಬೇಕೆಂಬ ನಿಯಮ ಇದೆ ಎಂದರೆ ಸಾಕ್ಷಿ ಆ ರೀತಿ ನಿಯಮ ಇಲ್ಲ ಎನ್ನುತ್ತಾರೆ. ಬಸ್ಸನ್ನು ಚಲಾಯಿಸುವಾಗ ಫೋನ್ ಉಪಯೋಗಿಸುವಂತಿಲ್ಲ ಬಸ್ಸನ್ನು ಬಿಟ್ಟು ಕೆಳಗಡೆ ಇಳಿದಾಗ ಉಪಯೋಗಿಸಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಫೋನಿನಲ್ಲಿ ಮಾತನಾಡಿಕೊಂಡು ಒಮ್ಮೆಲೆ ಬಂದು ಬಲಭಾಗಕ್ಕೆ ಬಸ್ಸನ್ನು ತೆಗೆದುಕೊಂಡಿದ್ದರಿಂದ ಸದರಿ ಅಪಘಾತವಾಗಿದೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನಾನು ಯಾವುದೇ ಮಾನವೀಯತೆ ತೋರದೆ ವಿಡಿಯೋ ಮಾಡುತ್ತ ದೂರದಲ್ಲಿಯೇ ನಿಂತಿದ್ದೆ ಎಂದರೆ ಸಾಕ್ಷಿ ನಾನೇ ಅಂಬ್ಯುಲೆನ್ಸ ಗೆ ಫೋನ್ ಮಾಡಿದ್ದೆ ಎನ್ನುತ್ತಾರೆ. ವಿಡಿಯೋ ನಂ.4 ರಲ್ಲಿ ನೀವು ರಸ್ತೆ ಬಿಟ್ಟಿದ್ದಕ್ಕೆ ನಾವು ಮುಂದೆ ಬಂದೆವು ಆದರೆ ನೀವು ಸಡನ್ ಆಗಿ ಬಲಗಡೆ ತೆಗೆದುಕೊಂಡಿದ್ದಕ್ಕೆ ಅಪಘಾತವಾಗಿದೆ ಎಂದು ಅಲ್ಲಿದ್ದಂತಹ pillion rider ರವರು ಹೇಳಿದ್ದಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ಹಾಜರಪಡಿಸಿರುವ ದಾಖಲೆಗಳಲ್ಲಿಯೇ ಅದು ಇದೆ ಆದರೂ ಕೂಡ ನಾನು ನ್ಯಾಯಾಲಯಕ್ಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ pillion rider ರವರಿಗೆ ನೀವು ಈಗ ಹೇಳಿದಂತೆ ಪೊಲೀಸ್ ಠಾಣೆಯಲ್ಲಿ ಹೇಳಿಕೆ ಕೊಡಿ ಎಂದು ಕೇಳಿಕೊಂಡಿರಾ ಎಂದರೆ ಸಾಕ್ಷಿ ನಾನು ಕೇಳಿದೆ ಆದರೆ ಪೊಲೀಸರು ಅದು ಸಣ್ಣ ಗಾಡಿಯಾಗುತ್ತದೆ ಆ ಕಾರಣಕ್ಕೆ ದೊಡ್ಡ ಗಾಡಿಯ ಮೇಲೆ ದೂರು ತೆಗೆದುಕೊಳ್ಳುತೆತೇವೆ ಎಂದು ಹೇಳಿದರು ಎಂದು ನುಡಿಯುತ್ತಾರೆ. ನಾನು ಆ ರೀತಿ ಯಾವುದೇ ಪ್ರಯತ್ನ ಪಟ್ಟಿಲ್ಲ ಆದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರು ಕೊಟ್ಟರೂ ಕ್ರಮ ತೆಗೆದುಕೊಳ್ಳಲಿಲ್ಲ ಎಂಬ ಕಾರಣಕ್ಕೆ ಖಾಸಗಿ ದೂರನ್ನೇನಾದರೂ ದಾಖಲಿಸಿರುತ್ತೀರಾ ಎಂದರೆ ಸಾಕ್ಷಿ ದಾಖಲಿಸಿರುತ್ತೇನೆ ಎನ್ನುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಹುಡುಕುತ್ತಿದ್ದೇನೆ ಎನ್ನುತ್ತಾರೆ. ನಾನು ಯಾವುದೇ ಖಾಸಗಿ ದೂರು ದಾಖಲಿಸಿರುವುದಿಲ್ಲ ಆದರೂ ನ್ಯಾಯಾಲಯದಲ್ಲಿ

ಹುಡುಕುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಿಡಿಯೋವನ್ನು ಕೇವಲ ನನ್ನ ತಪ್ಪು ಇಲ್ಲ ಎಂದು ತೋರಿಸಲು ಮಾಡಿರುತ್ತೇನೆಯೇ ಹೊರತು ಅದರಲ್ಲಿ ಪೂರ್ಣ ವಿಡಿಯೋ ರೇಕಾರ್ಡಿಂಗ್ ಇಲ್ಲ ಎಂದರೆ ಅದು ಸರಿಯಲ್ಲ ಎನ್ನುತ್ತಾರೆ. ಅದರಲ್ಲಿ ಕೇವಲ 20 ರಿಂದ 30 ಸೆಕೆಂಡ್ ಗಳು ಮಾತ್ರ ನಾನು ವಿಡಿಯೋ ಮಾಡಿದ್ದು ಉಳಿದವುಗಳನ್ನು ಡಿಲೀಟ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾಹನವನ್ನು ಚಲಾಯಿಸುವಾಗ ಬ್ರಿಡ್ಜ ಹತ್ತಿರ ಬಂದಾಗ ಬೈಕ್ ಸವಾರ ಅತೀ ವೇಗ ಮತ್ತು ಕುಡಿದ ಮತ್ತಿನಲ್ಲಿ ಬಂದು ಬಸ್ಸಿಗೆ ಓವರ್ ಟೇಕ್ ಮಾಡಿ ಡಿಕ್ಕಿ ಹೊಡೆದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಷ್ಟ ಪರಿಹಾರ ಕೊಡಬೇಕೆಂಬ ಕಾರಣಕ್ಕೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರಪಡರುವ ವಿಡಿಯೋವನ್ನು ಸಿಸಿ ಪ್ರಕರಣದಲ್ಲಿ ಹಾಜರಪಡಿಸಿಲ್ಲ ಎಂದರೆ ಸಾಕ್ಷಿ ಹಾಜರಪಡಿಸಿರುತ್ತೇನೆ ಎನ್ನುತ್ತಾರೆ. ಆ ಕಾರಣಕ್ಕೆ ನಾವು ಪರಿಹಾರ ಕೊಡಲು ಬಾಧ್ಯಸ್ಥರಿರುತ್ತೇವೆ ಎಂದರೆ ಸರಿಯಲ್ಲ. ಪ್ರಮಾಣಪತ್ರದಲ್ಲಿರುವ ವಿಚಾರಗಳು ನಾವೇ ಸೃಷ್ಟಿ ಮಾಡಿರುವಂತಹ ವಿಚಾರಗಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**